**ಸನ್–ಕ್ರಾಂತಿ ಕುರಿತು:**

ಇದು ರಾಷ್ಟ್ರಮಟ್ಟದ ಯುವವೇದಿಕೆಯಾಗಿದ್ದು, ನಗರೀಕರಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡಿದೆ. ಹೆಸರಿಗೆ ತಕ್ಕಂತೆ, ನಮ್ಮ ಅನೇಕ ಸಮಕಾಲೀನ ಸವಾಲುಗಳಲ್ಲಿ ನಾವು ಭಾಗಿಯಾಗುವ ರೀತಿಯಲ್ಲಿಯೇ ಇದು ರೂಪಾಂತರಕ್ಕೆ ಕರೆ ನೀಡುತ್ತದೆ ಮತ್ತು ನಮ್ಮ ನಗರಗಳ ಮಾಲೀಕತ್ವ ವಹಿಸಿಕೊಳ್ಳುವ ಕೆಲಸಕ್ಕೆ ಮುಂದಾಗಿರುತ್ತದೆ. **ಸನ್–ಕ್ರಾಂತಿ**ಯು ರಾಷ್ಟ್ರದ ಪ್ರಮುಖ ನಗರ ತಜ್ಞರ ಮೂಲಕ ವಿದ್ಯಾರ್ಥಿಗಳಿಗೆ ಸಹಯೋಗ, ಯಶಸ್ವಿ ಕಲಿಕೆ ಮತ್ತು ಮಾರ್ಗದರ್ಶನದ ಅವಕಾಶಗಳನ್ನು ಒದಗಿಸುತ್ತದೆ.

ವಲಸೆ ಹಾಗೂ ಜನಸಂಖ್ಯೆಯಿಂದ ಸಂಚಾರದಟ್ಟಣೆ ತನಕ ನಾವು ನಿಯಮಿತ, ಬಹುಆಯಾಮದ ದೃಷ್ಟಿಕೋನದಲ್ಲಿ ನಗರದ ಸಮಸ್ಯೆಗಳನ್ನು ತೆರೆದ ಕಣ್ಣಿನಿಂದ ನೋಡುತ್ತಿರುತ್ತೇವೆ. ಕಾರ್ಯಸಾಧ್ಯವಾದ, ಶಿಸ್ತುಬದ್ಧವಾದ ಪರ್ಯಾಯಗಳನ್ನು ಕಂಡುಕೊಳ್ಳಲು **ಸನ್–ಕ್ರಾಂತಿ** ಪಂಥಾಹ್ವಾನ ನೀಡುತ್ತದೆ. ಜನಾಗ್ರಹ–ಸೆಂಟರ್ ಫಾರ್ ಸಿಟಿಜನ್‌ಶಿಪ್ ಮತ್ತು ಡೆಮಾಕ್ರಸಿ (ಜೆಸಿಸಿಡಿ) ಹಾಗೂ ಯೇಲ್‌ನ ದಕ್ಷಿಣ ಏಷ್ಯಾ ಅಧ್ಯಯನ ಮಂಡಳಿ ಸಹಭಾಗಿತ್ವದೊಂದಿಗೆ ಭಾರತೀಯ ಮಾನವ ವಸಾಹತುಗಾಗಿರುವ ಸಂಸ್ಥೆ (ಐಐಎಚ್‌ಎಸ್) ಕೈಗೊಂಡ ಉಪಕ್ರಮಕ್ಕೆ **ಸನ್–ಕ್ರಾಂತಿ–** ವಿದ್ಯಾರ್ಥಿ ಪಂಥಾಹ್ವಾನ, ನಗರ ಭಾರತ ಸಮ್ಮೇಳನ 2011ಕ್ಕೆ ಮುನ್ನುಡಿ ಬರೆಯಲಿದೆ.

ನಮ್ಮ ನಗರದ ಕೆಲವು ತೀವ್ರ ಸ್ವರೂಪದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳು ನಮ್ಮ ಆರ್ಥಿಕತೆ, ಸಮಾಜ, ಪರಿಸರ ಮತ್ತು ರಾಜಕೀಯದ ಮೇಲೆ ಬೀರುವ ಬಹು–ಆಯಾಮದ ಪರಿಣಾಮಗಳೇನು ಎಂಬುದನ್ನು ಕಂಡುಕೊಳ್ಳುವಂತೆ **ಸನ್–ಕ್ರಾಂತಿ** ವಿದ್ಯಾರ್ಥಿಗಳಿಗೆ ಆಹ್ವಾನ ನೀಡುತ್ತದೆ. ಇಲ್ಲಿರುವ ಪಂಥಾಹ್ವಾನ ಏನೆಂದರೆ, ಬಹುಸ್ತರದಿಂದ ಬಂದ ತಲಾ ಐದು ಮಂದಿ ತಂಡಗಳಾಗಿ ತಮ್ಮ ನಗರ ಅಥವಾ ಪಟ್ಟಣದ ಈ ಸಮಸ್ಯೆಗಳಿಗೆ ಕಾರ್ಯಸಾಧುವಾದ ಪರಿಹಾರಗಳನ್ನು ಸೂಚಿಸುವುದು.

ಇವುಗಳಲ್ಲಿ ಉತ್ತಮ ತಂಡಗಳು ಮೈಸೂರಿನಲ್ಲಿ 2011ರ ನವೆಂಬರ್‌ನಲ್ಲಿ ನಡೆಯುವ ಬಹುನಿರೀಕ್ಷಿತ ನಗರ ಭಾರತ ಸಮ್ಮೇಳನದಲ್ಲಿ (www.iuc2011.in) ಭಾಗವಹಿಸುವುದರೊಂದಿಗೆ ಇದು ಮುಕ್ತಾಯ ಕಾಣುತ್ತದೆ.

**ಸನ್–ಕ್ರಾಂತಿ ವಿದ್ಯಾರ್ಥಿ ಪಂಥಾಹ್ವಾನ ಯಾರಿಗೆಲ್ಲ:**

ಸದ್ಯ ಸ್ನಾತಕೋತ್ತರ ಪದವಿ ಮತ್ತು ಪಿಎಚ್‌ಡಿ ಅಧ್ಯಯನ ಮಾಡುತ್ತಿರುವವರು, ಕಳೆದ ಶೈಕ್ಷಣಿಕ ವರ್ಷದಲ್ಲಿ ತಮ್ಮ ಸ್ನಾತಕೋತ್ತರ ಪದವಿ ಹಾಗೂ ಪಿಎಚ್‌ಡಿ ಪದವಿಗಳನ್ನು ಪೂರ್ಣಗೊಳಿಸಿದವರು. ಐದು ಗುಂಪುಗಳ ತನಕ ಎಲ್ಲ ವರ್ಗಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಪ್ರತಿಯೊಂದು ತಂಡಕ್ಕೂ ಅವರ ಪ್ರವೇಶಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.

ರಾಷ್ಟ್ರಾದ್ಯಂತದಿಂದ ಬಂದ ಪ್ರವೇಶಗಳನ್ನು ಅವುಗಳು ಗಳಿಸುವ ಅಂಕಗಳ ಆಧಾರದಲ್ಲಿ ಹಿರಿಯ ಶಿಕ್ಷಣ ತಜ್ಞರು, ವೃತ್ತಿದಾರರು ಮತ್ತು ನೀತಿ ನಿರೂಪಕರನ್ನು ಒಳಗೊಂಡ ತೀರ್ಪುಗಾರರ ತಂಡ 20 ತಂಡಗಳನ್ನು ಆಯ್ಕೆ ಮಾಡಲಿದೆ. ತಂಡ ಗುರುತಿಸಿದ ಸಮಸ್ಯೆ ಮತ್ತು ಅದಕ್ಕೆ ಪ್ರಸ್ತಾಪಿಸಲಾದ ಪರಿಹಾರದ ವಿಶ್ಲೇಷಣಾತ್ಮಕತೆಯಲ್ಲಿ ಇರುವ ಸ್ಪಷ್ಟತೆ ಹಾಗೂ ತಂಡದ ವೈವಿಧ್ಯತೆಯ ಆಧಾರದಲ್ಲಿ ಅಂಕಗಳನ್ನು ನೀಡಲಾಗುತ್ತದೆ.

ಹೀಗೆ 20 ತಂಡಗಳನ್ನು ಆಯ್ಕೆ ಮಾಡಿದ ನಂತರ, ಗೌರವಾನ್ವಿತ ತಜ್ಞರು ಮಾರ್ಗದರ್ಶನ ನೀಡುತ್ತಾರೆ, ಇದರಿಂದ ತಂಡಗಳು ಸಮಸ್ಯೆಗಳಿಗೆ ತಾವು ಕಂಡುಕೊಂಡ ಪರಿಹಾರಕ್ಕೆ ಇನ್ನಷ್ಟು ಸಮಗ್ರ ರೂಪ ಕೊಡಲು ಸಾಧ್ಯವಾಗುತ್ತದೆ. ಈ ಮಾರ್ಗದರ್ಶನ ಅವಧಿಯಲ್ಲಿಯೂ ತಂಡಗಳಿಗೆ ಅಂಕಗಳನ್ನು ನೀಡಲಾಗುತ್ತದೆ ಮತ್ತು ಅಂತಿಮವಾಗಿ ಈ ಮಾರ್ಗದರ್ಶನ ಪ್ರಕ್ರಿಯೆಯಲ್ಲಿ 5 ತಂಡಗಳನ್ನು ಆಯ್ಕೆ ಮಾಡಲಾಗುತ್ತದೆ. ಈ

ಐದು ತಂಡಗಳಿಗೆ ಮೈಸೂರಿನಲ್ಲಿ ನಡೆಯುವ ನಗರ ಭಾರತ ಸಮ್ಮೇಳನದಲ್ಲಿ ತಮ್ಮ ವಿಚಾರವನ್ನು ಮಂಡಿಸಲು ಅವಕಾಶ ನೀಡಲಾಗುತ್ತದೆ. ಮೂರು ತಂಡಗಳಿಗೆ ನಗದು ಬಹುಮಾನ ಸಿಗಲಿದೆ. ಎಲ್ಲ 20 ತಂಡಗಳಿಗೆ ನಗರ ಭಾರತ ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನ ನೀಡಲಾಗುವುದು ಮತ್ತು ಅವರಿಗೆ ವಿಶ್ವದಾದ್ಯಂತದಿಂದ ಬಂದ ಹಿರಿಯ ಶಿಕ್ಷಣ ತಜ್ಞರು, ವೃತ್ತಿದಾರರು ಮತ್ತು ನೀತಿ ನಿರೂಪಕರ ಜೊತೆ ಸಮಾಲೋಚನೆ ನಡೆಸಲು ಅವಕಾಶ ದೊರೆಯುತ್ತದೆ.
**ಸನ್–ಕ್ರಾಂತಿ** ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ಸಲ್ಲಿಸಲು www.transformurbanindia.com

ಈ ಅಂತರ್ಜಾಲಕ್ಕೆ ಭೇಟಿ ನೀಡಿ.

ಫೇಸ್‌ಬುಕ್‌ನಲ್ಲಿ ಕೂಡ ಸಂಪರ್ಕ ಲಭ್ಯ www.facebook.com/pages/San-kranti-Transform-Urban-India/133897540019509
ಟ್ವೀಟರ್‌ನಲ್ಲೂ **ಸನ್–ಕ್ರಾಂತಿ**ಗೆ ಟ್ವೀಟ್ ಮಾಡಿ http://twitter.com/#!/San_kranti

**ಐಯುಸಿ ಬಗ್ಗೆ**

ನಗರ ಭಾರತ ಸಮ್ಮೇಳನ 2011 (ಐಯುಸಿ) ಸರಣಿ ಕಾರ್ಯಕ್ರಮಗಳಾಗಿದ್ದು, ಭಾರತದ ನಗರೀಕರಣ ಸವಾಲುಗಳ ಪ್ರಮುಖ ಅಂಶಗಳು ಮತ್ತು ರಾಷ್ಟ್ರದ ಅಭಿವೃದ್ಧಿಯ ಕುರಿತು ನಡೆಯುತ್ತಿರುವ ಚರ್ಚೆಯಲ್ಲಿ ಅವಕಾಶ ಕಲ್ಪಿಸುವ ರೀತಿಯಲ್ಲಿ ಇವನ್ನು ವಿನ್ಯಾಸಗೊಳಿಸಲಾಗಿದೆ. ನೀತಿ, ಪದ್ಧತಿ ಮತ್ತು ನಾಗರಿಕ ಸಮಾಜದ ಕ್ರಮದ ಬಗ್ಗೆ ಮಾಹಿತಿಯನ್ನು ಒದಗಿಸುವ ಬಹುಸ್ತರದ ಮಾತುಕತೆಗೆ ಬಹಿರಂಗ ವೇದಿಕೆಯನ್ನು ಕಲ್ಪಿಸುವುದು ಐಯುಸಿ ಉದ್ದೇಶ.